**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಃ ನ್ಯಾಯಾಲಯಃ ನರಸಿಂಹರಾಜಪುರ**

**ಸಿಸಿಃನಂಃ 641/2024**

**ಸಿ.ಡಬ್ಲ್ಯೂಃ 19**

**ಪಿ.ಡಬ್ಲೂಃ 6**

**ಸಾಕ್ಷಿದಾರರ ಹೆಸರು ಃ ನಿರಂಜನ್ ಗೌಡ**

**ತಂದೆಯ ಹೆಸರು ಃ ಶಂಕರೇಗೌಡ**

**ವಯಸ್ಸು ಃ 32 ವರ್ಷ**

**ಉದ್ಯೋಗ ಃ ಪಿ ಎಸ್ ಐ ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆ**

**ವಾಸಸ್ಥಳ ಃ ಕುಂದಾಪುರ**

**ದಿನಾಂಕಃ 7.4.2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಃಃ ಮುಖ್ಯ ವಿಚಾರಣೆಃ ಮಾನ್ಯಃ ಎಪಿಪಿಯವರಿಂದಃ**

ನಾನು ದಿನಾಂಕಃ23.11.2023 ರಿಂದ 19.1.2026 ವರೆಗೆ ನ ರಾ ಪುರ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 3.8.2024 ರಂದು ಚಾಸಾ-16 ರವರು ನೀಡಿರುವ ಬೆರಳು ಮುದ್ರಾ ವರದಿಯನ್ನು ಪತ್ರ ಸಮೇತ ಸ್ವೀಕರಿಸಿಕೊಂಡಿರುತ್ತೇನೆ. ಸಾಕ್ಷಿ ಸದರಿ ವರದಿ ಮತ್ತು ಪತ್ರವನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-15, ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು. ದಿನಾಂಕಃ 5.8.2024 ರಂದು ಸದರಿ ಪ್ರಕರಣದ 1 ನೇ ಆರೋಪಿತರ ಹಾಜರಾತಿಗಾಗಿ ಬಾಡಿ ವಾರೆಂಟ್ ಕೋರಿ ನ್ಯಾಯಾಲಯಕ್ಕೆ ಮನವಿ ಪತ್ರ ನಿವೇದಿಸಿಕೊಂಡಿರುತ್ತೇನೆ. ದಿನಾಂಕಃ 6.8.2024 ರಂದು ಸದರಿ 1 ನೇ ಆರೋಪಿತರನ್ನು ಬಾಡಿ ವಾರೆಂಟ್ ಮುಖೇನ ನ್ಯಾಯಾಲಯಕ್ಕೆ ಹಾಜರುಪಡಿಸಿ ತದನಂತರ ನ್ಯಾಯಾಲಯದ ಆದೇಶದ ಅನುಸಾರ 1 ನೇ ಆರೋಪಿತರನ್ನು 3 ದಿನಗಳ ಕಾಲ ತನಿಖೆಗಾಗಿ ಪೊಲೀಸ್ ಕಸ್ಟಡಿಗೆ ಪಡೆದುಕೊಂಡಿರುತ್ತೇನೆ. ಅದೇ ದಿನ 2 ನೇ ಆರೋಪಿತರ ದಸ್ತಗಿರಿಗೆ ಸಂಬಂಧಿಸಿದಂತೆ ಚಾಸಾ-12 ರವರನ್ನು ನಿಯೋಕ್ತಿಗೊಳಿಸಿರುತ್ತೇನೆ. ಚಾಸಾ-12 ರವರು 2 ನೇ ಆರೋಪಿತರನ್ನು ಬಂಧಿಸಿ ನನ್ನ ಸಮಕ್ಷಮ ಹಾಜರುಪಡಿಸಿ ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-16, ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು. ಅದೇ ದಿನ

ಪಂಚರಾದ ಚಾಸಾ-4 ಮತ್ತು 5 ರವರ ಸಮಕ್ಷಮ ಆರೋಪಿತರು ತೋರಿಸಿದಂತೆ ಕೃತ್ಯ ನಡೆದ ಸ್ಥಳದ ಮಹಜರನ್ನು ಸಂಜೆ 6.30 ರಿಂದ 7.00 ಗಂಟೆಯವರೆಗೆ ದಾಖಲು ಮಾಡಿಕೊಂಡಿರುತ್ತೇನೆ. ಸಾಕ್ಷಿ ಮಹಜರನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-9 ಎಂದು ಗುರುತಿಸಿದ್ದು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-9(ಡಿ) ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿ ತೆಗೆದ 1 ಪೋಟೋವನ್ನು ನೋಡಿ ಗುರುತಿಸಿದ್ದು ಅವು ಈಗಾಗಲೇ ನಿಪಿ-11 ಎಂದು ಗುರುತಿಸಲಾಗಿರುತ್ತದೆ.

ದಿನಾಂಕಃ 7.8.2024 ರಂದು ಚಾಸಾ-10 ರವರ ಮನೆಯಲ್ಲಿ ಆರೋಪಿತರು ಕಳ್ಳತನ ಮಾಡಿ ಮಾರಾಟ ಮಾಡಿದ್ದ ವಸ್ತುಗಳನ್ನು ಜಪ್ತು ಮಾಡಿಕೊಂಡಿರುತ್ತೇನೆ. ಸದರಿ ಸಮಯದಲ್ಲಿ ಅಮಾನತು ಮಹಜರನ್ನು ಮ 1.00 ರಿಂದ 1.30 ಗಂಟೆಯವರೆಗೆ ದಾಖಲು ಮಾಡಿರುತ್ತೇನೆ. ಸಾಕ್ಷಿ ಮಹಜರನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-12 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-12(ಬಿ) ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿ ತೆಗೆದ 1 ಪೋಟೋವನ್ನು ನೋಡಿ ಗುರುತಿಸಿದ್ದು ಅವು ಈಗಾಗಲೇ ನಿಪಿ-13 ಎಂದು ಗುರುತಿಸಲಾಗಿರುತ್ತದೆ. ಅದೇ ದಿನ ಚಾಸಾ-1, 8 ರಿಂದ 11 ರವರ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿರುತ್ತೇನೆ. ಮಹಜರ್ ಕಾಲದಲ್ಲಿ ತೆಗೆದ ಪೋಟೋಗಳನ್ನು ಚಾಸಾ-17 ರವರಿಂದ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65 ಬಿ ದೃಢೀಕರಣ ಪಡೆದುಕೊಂಡಿರುತ್ತೇನೆ.ಸಾಕ್ಷಿ ಸದರಿ ದೃಢೀಕರಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-17, ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು.

ದಿನಾಂಕಃ 13.8.2024 ರಂದು ಚಾಸಾ-14 ರವರಿಗೆ ಕೃತ್ಯ ನಡೆದ ಸ್ಥಳದ ದಾಖಲೆ ಕೋರಿ ಮನವಿ ಸಲ್ಲಿಸಿರುತ್ತೇನೆ. ಸಾಕ್ಷಿ ಸದರಿ ಮನವಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-18, ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ಚಾಸಾ-14 ರವರು ಕೃತ್ಯ ನಡೆದ ಸ್ಥಳದ ದಾಖಲೆ ವರದಿಯನ್ನು ನೀಡಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-19, ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು.

ಅದೇ ದಿನ ಮಾಳೂರು ಪೊಲೀಸ್ ಠಾಣೆಯ ಪಿ ಎಸ್ ಐ ರವರಿಗೆ ಪ್ರಕರಣದ ಆರೋಪಿತರ ವಿರುದ್ಧ ದಾಖಲಾಗಿರುವ ಕ್ರೈ ನಂಃ 92/2023 ಮತ್ತು 128/2023 ಪ್ರಕರಣಗಳಿಗೆ ಸಂಬಂಧಿಸಿದ ಪ್ರ ವ ವರದಿ, ದೂರಿನ ಪ್ರತಿ, ಆರೋಪಿತರ ಸ್ವ ಇಚ್ಛಾ ಹೇಳಿಕೆ ಹಾಗೂ ಉಳಿದ ದಾಖಲೆಗಳನ್ನು ನೀಡುವಂತೆ ಕೋರಿಕೊಂಡಿರುತ್ತೇನೆ. ಸಾಕ್ಷಿ ಮನವಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-20, ಸಾಕ್ಷಿಯ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು. ಮಾಳೂರು ಪೊಲೀಸ್ ಠಾಣೆಯ ಕ್ರೈ ನಂಃ 92/2023 ದಾಖಲೆಗಳನ್ನು

ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-21 ಎಂದು ಗುರುತಿಸಲಾಯಿತು. ಮಾಳೂರು ಪೊಲೀಸ್ ಠಾಣೆಯ ಕ್ರೈ ನಂಃ 128/2023 ದಾಖಲೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-22 ಎಂದು ಗುರುತಿಸಲಾಯಿತು.

ದಿನಾಂಕಃ 26.8.2024 ರಂದು ಮುಖ್ಯ ಆಯುಕ್ತರು ನಗರಸಭೆ ಭದ್ರಾವತಿ ರವರಿಗೆ ಚಾಸಾ-10 ರವರ ವಾಸದ ಸ್ಥಳದ ದಾಖಲಾತಿ ಮತ್ತು ಅಸೆಸ್ಮೆಂಟ್ ಕೋರಿ ಮನವಿ ಸಲ್ಲಿಸಿರುತ್ತೇನೆ. ಸಾಕ್ಷಿ ಸದರಿ ಮನವಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-23, ಸಾಕ್ಷಿಯ ಸಹಿಯನ್ನು ನಿಪಿ-23(ಎ) ಎಂದು ಗುರುತಿಸಲಾಯಿತು. ಸದರಿ ಕಚೇರಿಯವರು ನೀಡಿದ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-24, ಸಾಕ್ಷಿಯ ಸಹಿಯನ್ನು ನಿಪಿ-24(ಎ) ಎಂದು ಗುರುತಿಸಲಾಯಿತು. ದಿನಾಂಕಃ 6.8.2024 ರಂದು ಪ್ರಕರಣದ ಆರೋಪಿತರ ಸ್ವ ಇಚ್ಛಾ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಸದರಿ ಹೇಳಿಕೆಗಳ ಭಾಗಾಂಶವನ್ನು ನೋಡಿ ಗುರುತಿಸಿದ್ದು ಸದರಿ ಹೇಳಿಕೆಗಳ ಭಾಗಾಂಶ "ಈಗ ತಾವು ನನ್ನೊಂದಿಗೆ ಬಂದರೆ ----------------- ನೀಡಿರುತ್ತೇನೆ." ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-25 ಮತ್ತು 26 ಎಂದು ಗುರುತಿಸಲಾಯಿತು. ನಂತರ ದಿನಾಂಕಃ 1.10.2024 ರಂದು ಅಂತಿಮ ವರದಿಯನ್ನು ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ಆರೋಪಿತರು ಗೈರು ಹಾಜರಿದ್ದು ಅವರ ಗುರುತುವಿಕೆಯನ್ನು ಆರೋಪಿತರ ಪರ ವಕೀಲರು ಅಲ್ಲಗಳೆಯುವುದಿಲ್ಲ.

**ಃಪಾಟೀ ಸವಾಲು ಆರೋಪಿತರ ಪರ ಶ್ರೀ.ಎಂ ಸಿ ವಕೀಲರಿಂದಃಃ**

ನನ್ನ ತನಿಖಾ ಕಾಲದಲ್ಲಿ ಸದರಿ ದೇವಸ್ಥಾನದಲ್ಲಿ ಕಳುವಾದ ಪೂಜಾ ಸಾಮಾಗ್ರಿಗಳ ಮಾಲೀಕತ್ವದ ಬಗ್ಗೆ ತನಿಖೆ ಮಾಡಿರುವುದಿಲ್ಲ. ನಾನು ಈ ಪ್ರಕರಣದಲ್ಲಿ ಬೆರಳಚ್ಚು ತಜ್ಞರಿಗೆ ಕಳುವಾಗಿರುವ ವಿಚಾರವಾಗಿ ಆರೋಪಿತರ ಬೆರಳಚ್ಚು ಮಾದರಿಯನ್ನು ಪರೀಕ್ಷಿಸಿ ವರದಿ ನೀಡಬೇಕೆಂದು ಮನವಿ ಮಾಡಿರುವುದಿಲ್ಲ. ಸಾಕ್ಷಿ ಮುಂದುವರೆದು ರಾಜ್ಯ ಮಟ್ಟದಲ್ಲಿ ಕಳ್ಳತನ ವಿಚಾರಗಳಿಗೆ ಸಂಬಂಧಿಸಿದಂತೆ ಸಂಭಾವ್ಯ ಆರೋಪಿತರ ಬೆರಳಚ್ಚು ಮಾದರಿಗಳನ್ನು ಸಂಗ್ರಹದಲ್ಲಿ ಇಟ್ಟುಕೊಂಡಿದ್ದು, ಕಳ್ಳತನ ಪ್ರಕರಣ ದಾಖಲಾದ ತಕ್ಷಣ ಸದರಿ ಸಂಗ್ರಹದ ಮಾದರಿಗಳನ್ನು ಸ್ವಯಂ ತನಿಖಾಧಿಕಾರಿಗಳಿಗೆ ಸಂಬಂಧಪಟ್ಟ ಬೆರಳಚ್ಚು ಘಟಕದವರು ಸಲ್ಲಿಸುತ್ತಾರೆ ಎಂದು ನುಡಿಯುತ್ತಾರೆ. ಸದರಿ ಬೆರಳಚ್ಚು ತಜ್ಞರಿಂದ ವರದಿ ಪಡೆಯುವ ಸಂದರ್ಭದಲ್ಲಿ ಯಾವುದೇ ಮಹಜರ್ ಮತ್ತು ಪೋಟೋ ಆ ಸಂದರ್ಭದಲ್ಲಿ ಜರುಗಿಸಿರುವುದಿಲ್ಲ. ನನ್ನ ತನಿಖಾ ಕಾಲದಲ್ಲಿ ಆರೋಪಿತರ ಬೆರಳಚ್ಚು ಮಾದರಿಯನ್ನು ಪಡೆದುಕೊಂಡು ಬೆರಳಚ್ಚು ತಜ್ಞರ ಘಟಕಕ್ಕೆ

ಕಳುಹಿಸಿರುವುದಿಲ್ಲ. ನಾನು ಆರೋಪಿತರ ಸ್ವ ಇಚ್ಛಾ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಸ್ಥಳ ಮತ್ತು ಅಮಾನತು ಮಹಜರನ್ನು ದಾಖಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯವನ್ನು ಸಂಗ್ರಹಿಸಿ ಸುಳ್ಳು ಆರೋಪ ಪಟ್ಟಿಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಾನು ಆರೋಪಿತರ ವಿರುದ್ಧ ಸುಳ್ಳು ಬೆರಳಚ್ಚು ವರದಿಯನ್ನು ಸ್ವೀಕರಿಸಿ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಪ್ರಕರಣದಲ್ಲಿ ಅಮಾನತುಪಡಿಸಿಕೊಂಡ ವಸ್ತುವಿಗೂ ಆರೋಪಿತರಿಗೆ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಃಃ ಮರು ವಿಚಾರಣೆ ಇಲ್ಲಃಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**Sd/-xx**
**ಪ್ರ.ದ.ನ್ಯಾದಂಃ ನ.ರಾ.ಪುರ.**

**ಸಾಕ್ಷಿ ಸಹಿಃ**